ಪ್ರಮಾಣದಲ್ಲಿ ಇರಬೇಕಾಗಿತ್ತೋ ಆ ಪ್ರಮಾಣದಲ್ಲಿ ಸುಣ್ಣದ ಗುಣಮಟ್ಟ ಇಲ್ಲದೇ ಇರತಕ್ಕ ಸಬ್‌ಸ್ಟ್ಯಾಂಡರ್ಡ್ ಸುಣ್ಣವನ್ನು ಸರಬರಾಜು ಮಾಡಿದ್ದುದು ನಿಜ. ಅವರ ಮೇಲೆ ತಕ್ಷಣ ಕ್ರಮವನ್ನೂ ಕೂಡ ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಬೇರೆ ವಿಚಾರವನ್ನು ಹೇಳುತ್ತಿದ್ದಾರೆ ಅದನ್ನು ಗಮನಿಸುತ್ತೇನೆ. ಎಲ್ಲೆಲ್ಲಿ ಈ ತರಹ ಲೋಪವಾಗಿದೆಯೋ ಅದನ್ನು ಎಲ್ಲಾ ಸದಸ್ಯರು ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡುತ್ತೇನೆ.

ವಿಷಯ:- ಬೆಂಗಳೂರಿನಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 77 (783)

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳ ಕೇಂದ್ರ ಪ್ರದೇಶದಿಂದ ಶಾಲೆ ಮತ್ತು ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಅವರ ವಾಸಸ್ಥಳಗಳಿಂದ ಸಂಬಂಧಿಸಿದ ವಿದ್ಯಾಸಂಸ್ಥೆಗಳಿಗೆ ನಿಗದಿತ ಮಾರ್ಗದಲ್ಲಿ ಪ್ರತ್ಯೇಕವಾದ ಮತ್ತು ಸಮರ್ಪಕವಾದ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದೇ?

ಆ) ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳಿಂದ ಉದಾಹರಣೆಗಾಗಿ ಬನಶಂಕರಿ 3ನೇ ಹಂತ, ಬ್ಯಾಂಕ್ ಕಾಲೋನಿ, ಶ್ರೀನಗರ, ರಾಜೇಶ್ವರಿ ನಗರ, ಇತರೆ ಗ್ರಾಮಾಂತರ ಸ್ಥಳಗಳಿಂದ ನಾರ್ತ್ ರೋಡ್, ಬಸವನಗುಡಿ, ಜಯನಗರ 9ನೇ ಬ್ಲಾಕ್‌ಗಳಿಗೆ ಶಾಲಾ ಸಮಯಕ್ಕೆ ಅನುಗುಣವಾಗಿ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಬೆಳಿಗ್ಗೆ ಮತ್ತು ಸಾಯಂಕಾಲ ಶಾಲೆಗಳಿಗೆ ಅಧಿಕ ಸುತ್ತುವಳಿಗಳನ್ನು ಓಡಿಸುವುದು ಕಾರ್ಯಸಾಧ್ಯ ಹಾಗೂ ಸೂಕ್ತವಾಗಿರುವುದಿಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಈಗ ಹೆಚ್ಚಿಗೆ ಪ್ರಶ್ನೆಯನ್ನು ಕೇಳವುದಿಲ್ಲ, ನನ್ನ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ತಾವು ಪುನರ್ ಪರಿಶೀಲನೆ ಮಾಡಿ ಅವಶ್ಯಕತೆ ಇರುವ ಕಡೆ ಹೆಚ್ಚಿನ ಸರ್ವೆ ಮಾಡಿಸಿ, ಈಗ ನ್ಯಾಷನಲ್ ಕಾಲೇಜು ಬಹಳ ಹೆಸರುವಾಸಿ, ವಿಜಯಕಾಲೇಜು ಬಹಳ ಹೆಸರುವಾಸಿ. ಆ ಕಾಲೇಜುಗಳಿಗೆ ಶ್ರೀನಗರ, ಬ್ಯಾಂಕ್ ಕಾಲೋನಿ ಇಂತಹ ಪ್ರದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ತೀರಾ ಅನಿವಾರ್ಯವೆಂದು ಕಂಡ ಕಡೆ ಇದನ್ನು ಪರಿಶೀಲಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರು ಸಿಟಿಯಲ್ಲಿ ಟ್ರಾಫಿಕ್ ಜಾಸ್ತಿಯಾಗಿದೆ. ಒಂದು ದಿವಸಕ್ಕೆ ಸುಮಾರು 22 ಲಕ್ಷ ಜನ ಕಮ್ಯೂಟರ್ಸ್ ಪ್ರಯಾಣ ಮಾಡುತ್ತಾರೆ. ಈಗಿರತಕ್ಕ ನಮ್ಮ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ತಕ್ಷಣವಾಗಿ ಹೆಚ್ಚಿಗೆ ಬಸ್‌ಗಳನ್ನು ಹಾಕುವುದರಲ್ಲಿ, ಹೆಚ್ಚಿಗೆ ಟ್ರಿಪ್ಸ್‌ಗಳನ್ನು ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ. ಇದೇ ಸದನದಲ್ಲಿ ಮೂರು ನಾಲ್ಕು ತಿಂಗಳು ಹಿಂದೆ ಮೋಟಾರ್ ವೆಹಿಕಲ್ಸ್ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್ ತಂದೆವು.

ಅಧ್ಯಕ್ಷರು:- ಅದಕ್ಕಿಂತಲೂ ಕೂಡ ಹೆಚ್ಚಾಗಿ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮಲ್ಲಿ ನೈಬರ್‌ಹುಡ್ ಸ್ಕೂಲ್ಸ್ ಇಲ್ಲ. ಎಂಇಎಸ್ ಕಾಲೇಜಿನಲ್ಲಿ ಚೆನ್ನಾಗಿ ಕೋಚಿಂಗ್ ಹೇಳಿದರೆ, ಜಯನಗರದಿಂದ ಎಂಇಎಸ್ ಕಾಲೇಜಿಗೆ ಹೋಗುತ್ತಾರೆ. ಬಸ್ ಹಾಕುವುದು ಬಹಳ ಕಷ್ಟವಾಗುತ್ತದೆ. ನ್ಯಾಷನಲ್ ಕಾಲೇಜಿನಲ್ಲಿ ಸೀಟು ಸಿಗುತ್ತದೆಂದರೆ ಇಂದಿರಾನಗರದಿಂದ ಅಲ್ಲಿಗೆ ಬರುತ್ತಾರೆ. ನೈಬರ್‌ಹುಡ್ ಸ್ಕೂಲ್ಸ್ ಇದ್ದರೆ ಏನಾಗುತ್ತದೆಂದರೆ ಆಯಾ ಪ್ರದೇಶದಲ್ಲಿರತಕ್ಕ ಶಾಲಾಕಾಲೇಜುಗಳಿಗೆ ಹೋಗುತ್ತಾರೆ. ಹತ್ತಿರದಿಂದ ಬಸ್ ಅರೇಂಜ್ ಮಾಡುವುದಕ್ಕೆ ಸುಲಭವಾಗುತ್ತದೆ. ಬೆಂಗಳೂರಿನಲ್ಲಿ ಕೆಲವೇ ಶಾಲಾಕಾಲೇಜುಗಳಿಗೆ ಅಡ್ಮಿಷನ್ ಕೇಳುವುದು.. ಅಲ್ಲಿಗೆ ಕೆಲವು ಪ್ರತಿಷ್ಠಿತರು ಹೋಗುವುದು. ಅವರೆಲ್ಲಾ ಸ್ವಂತ ಅರೇಂಜ್‌ಮೆಂಟ್ ಮಾಡಿಕೊಂಡಿರುತ್ತಾರೆ. ಆದರೆ ಕಂದಾಯ ಪ್ರದೇಶದಲ್ಲಿರತಕ್ಕ ಬೇರೆ ಜನರಿಗಾಗಿ ಈ ಸೌಕರ್ಯ ಡೆಫನೆಟ್ ಆಗಿ ಆಗುತ್ತದೆಯೆ? ಇದು ಅಗತ್ಯವಿದೆ.

+SRI P.G.R.SINDHIA:- I am answering that point, I am coming to that point ರೆವಿನ್ಯೂ ಪ್ಯಾಕೆಟ್ಸ್ ಏನು ಇವೆ ಇವುಗಳನ್ನು ರೆಗ್ಯುಲರೈಸ್ ಮಾಡಿಸಿ ಕಾರ್ಪೊರೇಷನ್ ಲಿಮಿಟ್ಸ್‌ನ್ನು ಹೆಚ್ಚು ಮಾಡಿದ್ದಾರೆ. ಇದುವರೆಗೂ ಸಹಿತ ಬಿಟಿಎಸ್ ಬಸ್ ಬೆಂಗಳೂರು ಸಿಟಿ ಕಾರ್ಪೊರೇಷನ್ ಲಿಮಿಟ್ಸ್‌ನಿಂದ 22 ಕಿಲೋಮೀಟರ್ ಮಾತ್ರ ಹೋಗುವುದು ಎಂದು ಮಾಡಿದ್ದರು. 15-20 ವರ್ಷಗಳ ಹಿಂದೆ ಈ ಲಿಮಿಟ್ಸ್‌ನ್ನು ಫಿಕ್ಸ್ ಮಾಡಿದ್ದರು. ಅದರಿಂದಾಗಿ 8 ಕಿಲೋಮೀಟರ್ ವಿಸ್ತೀರ್ಣ ಜಾಸ್ತಿ ಮಾಡಬೇಕೆಂದು ಇದ್ದೇವೆ. ಬೆಂಗಳೂರು ಸುತ್ತಮುತ್ತ ಇರತಕ್ಕ ಅನೇಕ ವರ್ತೂರು, ಉತ್ತರಹಳ್ಳಿ, ಯಲಹಂಕ ಈ ನಾಲ್ಕೈದು ಕ್ಷೇತ್ರಗಳು ಏನಿವೆ ಈ ಕ್ಷೇತ್ರಗಳಲ್ಲಿರತಕ್ಕ ಕೆಲವು ಹಳ್ಳಿಗಳಲ್ಲಿ ಯಾರು ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಬರುತ್ತಾರೆ. ಅವರಿಗೆ ಇದರಿಂದ ಅನುಕೂಲವಾಗುತ್ತದೆ.

ಆದರೆ ಅದಕ್ಕೆ ಬೇಕಾಗಿರತಕ್ಕಂಥ ಇನ್‌ಫಾಸ್ಟ್ರಕ್ಚರ್ಸ್‌ನ್ನು ಮುಂಚೆ ಡೆವಲಪ್ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಈ ದಿವಸ ನಾಲ್ಕು ಹೊಸ ಡಿಪೋಗಳನ್ನು ಬಿಟಿಎಸ್.ಗೆ ಮಾಡಬೇಕೆಂದು ಇದ್ದೇವೆ. ಮೋಟಾರ್ ವೆಹಿಕಲ್ಸ್ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಬಿಲ್‌ನ್ನು ಇಲ್ಲಿ ಇಂಟ್ರೋಡ್ಯೂಸ್ ಮಾಡಿ ಪಾಸ್ ಮಾಡಿಸಿದ್ದೇವೆ. ಬಿ.ಟಿ.ಎಸ್. ಕೆಳಗಡೆ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್.

ಪರ್ಮಿಟ್ಸ್ ತೆಗೆದುಕೊಂಡು ಖಾಸಗಿಯವರಿಂದ ನಾಲ್ಕುನೂರು ಬಸ್ಸುಗಳನ್ನು ಬಾಡಿಗೆಗೆ ತೆಗೆದುಕೊಂಡು ನಾವೇ ಓಡಿಸಬೇಕೆಂದು ವಿಚಾರ ಮಾಡಿದ್ದೇವೆ. ಅದರ ಜೊತೆಗೆ 120 ಬಸ್ಸುಗಳನ್ನು ಈ ದಿವಸ ಬಿ.ಟಿ.ಎಸ್.ಗೆ ಅಡಿಷನಲ್ ಆಗಿ ಮಾಡಬೇಕೆಂದು ಯೋಜನೆ ಇಟ್ಟುಕೊಂಡಿದ್ದೇವೆ. ಬಹುಶಃ ಇನ್ನು ಐದಾರು ತಿಂಗಳುಗಳ ಒಳಗೆ ಪರಿಸ್ಥಿತಿ ಸುಧಾರಿಸಬಹುದು ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಸದಸ್ಯರಿಗೆ ಮತ್ತು ಈ ಸದನಕ್ಕೆ ನಾನು ಕೊಡುತ್ತೇನೆ.

MR.SPEAKER:- I hope you are satisfied with the reply.

ವಿಷಯ:- ಸಹಕಾರಿ ಕಾಯ್ದೆಯ ಸೆಕ್ಷನ್ 121ರ ಮೇರೆಗೆ ಹೊರಡಿಸಿರುವ ಆದೇಶಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 78 (513)

ಶ್ರೀ ಡಿ.ಆರ್.ಪಾಟೀಲ್ (ಗದಗ್):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಹಕಾರಿ ಕಾಯ್ದೆಯಲ್ಲಿ ಸೆಕ್ಷನ್ 121ರಲ್ಲಿ ಸರಕಾರಕ್ಕಿರುವ ಅಧಿಕಾರವನ್ನು ಬಳಸಿ 95ನೇ ಜನವರಿಯಿಂದ ಇದೇ ಜೂನ್ 30ರವರೆಗೆ ಎಷ್ಟು ಸಲ ಸರಕಾರ ಆಜ್ಞೆಗಳನ್ನು ಹೊರಡಿಸಿದೆ. (ಅವುಗಳ ವಿವರ ನೀಡುವುದು).

ಆ) ಯಾವ ಯಾವ ಉದ್ದೇಶಗಳಿಗಾಗಿ ಈ ಆಜ್ಞೆಗಳನ್ನು ಹೊರಡಿಸಿದೆ? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):-

ಅ) 205 ಆದೇಶಗಳನ್ನು ಹೊರಡಿಸಿದೆ. ಪ್ರತ್ಯೇಕವಾಗಿ ವಿವರ ನೀಡಿದೆ.

ಆ) ಪ್ರತ್ಯೇಕವಾಗಿ ವಿವರ ನೀಡಿದೆ.